ದಿನಾಂಕ 13-4-2017
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.
**ಮುಂದುವರಿದ ಪಾಟೀ ಸವಾಲು ಃ ಶ್ರೀ ಎ ಸಿ ಪಿ ವಕೀಲರಿಂದ**

ಈಗ ತೋರಿಸಿದ ನಿಡಿ 1ಎ ಮೇಲೆ ಇರುವ 3 ಸಹಿಗಳನ್ನು ಇಗ ನೋಡುತ್ತಿದ್ದು ಸದರಿ ಸಹಿಗಳು ಯಾರದ್ದು ಎಂದು ಹೇಳಲು ಆಗುವುದಿಲ್ಲ, ನಿಡಿ 1ಎ ವಾದಿ ಶಿವಪ್ಪ ಭಾರತಿ ಇವರು 9-8-1986ರಂದು ಕ್ಯಾರಕೊಪ್ಪ ಗ್ರಾಮಪಂಚಾಯತಿ ಕಾರ್ಯದರ್ಶಿಗೆ ಕೊಟ್ಟಿದ್ದು ಎಂದರೆ ಸರಿಯಲ್ಲ, ಸದರಿ ನಿಡಿ 1ಎ ಇದನ್ನು ನನ್ನ ತಂದೆ ಶಿವಪ್ಪ ಭಾರತಿ ಇವರು ಬರೆದು ತನ್ನ ಮೂರು ಮಕ್ಕಳಾದ 1. ಸುನೀಲಕುಮಾರ, 2. ಸುಧೀರ 3. ನಾನು ಸುರೇಂದ್ರ ಸಹಿಗಳನ್ನು ಮಾಡಿಸಿ ಸರ್ವೆ ನಂಬರ 101ರ ಪೈಕಿ ಪ್ಲಾಟ ನಂಬರ 21ಕ್ಕೆ ತನ್ನ ತಮ್ಮನಾದ ಚಂದ್ರಶೇಖರ ಗುರುಬಸಪ್ಪ ಭಾರತಿ ಇವರ ಹೆಸರನ್ನು ಮಾತ್ರ ದಾಖಲಿಸಬೇಕೆಂದು ಕೇಳಿ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ, ಅದಕ್ಕೆ ನನ್ನ ತಂದೆ ಶಿವಪ್ಪ ಭಾರತಿ ಅವರು ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ, ಇಗ ತೋರಿಸಿದ ಸಹಿ ನನ್ನ ತಂದೆ ಶಿವಪ್ಪನದು ಅನ್ನುವುದು ಸರಿಯಲ್ಲ. ವಿವಾದಿತ ಆಸ್ತಿಯಲ್ಲಿ ಪಾಲು ಪಡೆಯಬೇಕೆಂದುಕೊಂಡು ಸದರಿ ಸಹಿ ನನ್ನ ತಂದೆಯದಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಿಡಿ 1ಎ ಇದಕ್ಕೆ ನಾನು ನನ್ನ ಸಹೋದರರು ಒಪ್ಪಿಗೆ ಸೂಚಿಸಿ ಸಹಿ ಮಾಡಿದ್ದರು ಸಹ ಆ ಸಹಿ ನಮ್ಮವುಗಳು ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂತಾ ಸೂಚಿಸುವುದು ಸರಿಯಲ್ಲ,

ನನ್ನ ತಂದೆ 9-3-1986ಕ್ಕೆ ನಿಡಿ 7 ರಂತೆ ತನ್ನ ಸಹೋದರ ಹೆಸರನ್ನು ಮಾತ್ರ ಪ್ಲಾಟ ನಂಬರ 21ಕ್ಕೆ ದಾಖಲಿಸಬೇಕೆಂದು ಕೋರಿ ತನ್ನ ಕೈಬರಹದಲ್ಲಿ ಅರ್ಜಿ ಕೊಟ್ಟ ಎನ್ನುವುದು ಸರಿಯಲ್ಲ, ನಿ ಡಿ1ಎ ಮತ್ತು ನಿಡಿ 7ರ ಪ್ರಕಾರ ನಮಗೆ ನೋಟಿಸ್ಸ ಕೊಟ್ಟು ನಿಡಿ 8ರ ಪ್ರಕಾರ ಗ್ರಾಮ ನಮೂನೆ ನಂಬರ 15ರಂತೆ ಡ ನಂಬರ 1318 ಪಾಸಾಗಿ ನನ್ನ ಚಿಕ್ಕಪ್ಪ ಚಂದ್ರಶೇಖರ ಭಾರತಿ ಅವರ ಹೆಸರು ಮಾತ್ರ ದಾಖಲಾತಿಯಿತು ಎನ್ನುವುದು ಸರಿಯಲ್ಲ, ಹಾಗೆ ಮಾಡಲು ನಾವು ಒಪ್ಪಿಗೆ ಕೊಟ್ಟಿಲ್ಲ,

ದಿನಾಂಕ 31-3-1984ರಂದು ನಮ್ಮ ಅಜ್ಜ ಗುರುಬಸಪ್ಪ ಮರಣ ಹೊಂದಿದ್ದಾರೆ ಎಂದರೆ ಸರಿ. ದಿನಾಂಕ 29-10-2001ರಂದು ನನ್ನ ಚಿಕ್ಕಪ್ಪ ಚಂದ್ರಶೇಖರ ಮರಣ ಹೊಂದಿದರು ಎಂದರೆ ಸರಿ. 14-12-2000 ರಂದು ನನ್ನ ಚಿಕ್ಕಪ್ಪ ತನ್ನ ಹೆಂಡತಿ ಶಾಂತವ್ವಳಿಗೆ ದಾವಾ ಆಸ್ತಿಯ ವಿಲ್ ಬರೆದು ಎನ್ನುವುದು ಗೊತ್ತಿಲ್ಲ, ಆ ಪ್ರಕಾರ ಶಾಂತಾಬಾಯಿ ಹೆಸರು ದಾವಾ ಆಸ್ತಿಗೆ ದಾಖಲಾಗಿದ್ದು ಗೊತ್ತಿಲ್ಲ,

ಪ್ಲಾಟ ನಂಬರ 21ರ ಉತಾರ ನೋಡಿದ್ದೇನೆ. ಅದಕ್ಕೆ ಮೊದಲು ನನ್ನ ಅಜ್ಜ ಗುರುಬಸಪ್ಪನ ಹೆಸರು ಇತ್ತು. ಆತನ ಹೆಸರು ಕಡಿಮೆಯಾಗಿ ಇಗ ನನ್ನ ಚಿಕ್ಕಮ್ಮ ಶಾಂತಾ ಇವಳ ಹೆಸರು ಬಂದಿದೆ. ಅಜ್ಜನ ಹೆಸರು ಕಡಿಮೆಯಾಗಿ ಚಿಕ್ಕಮ್ಮನ ಹೆಸರು ಮಾತ್ರ ನೇರವಾಗಿ ಬಂದಿದೆ. ಮಧ್ಯ ಯಾರ ಹೆಸರೂ ಆಸ್ತಿಗೆ ದಾಖಲು ಇರಲಿಲ್ಲ. ನನ್ನ ಅಜ್ಜನ ಮರಣದ ನಂತರ ಹೊಸಯಲ್ಲಾಪೂರದಲ್ಲಿದ್ದ ಆತನ ಮನೆಯನ್ನು ಅಜ್ಜಿ, ನನ್ನ ಅಪ್ಪ ಹಾಗು ಚಿಕ್ಕಪ್ಪ ಸೇರಿ ಹಣ ಹಂಚಿಕೊಂಡಿದ್ದಾರೆ. ಇನ್ನೊಂದು ನನ್ನ ಅಜ್ಜನ ಆಸ್ತಿಯೇ ಈ ಕ್ಯಾರಕೊಪ್ಪದ ಜಾಗೆ, ಆತನ ಮರಣದ ನಂತರ ನನ್ನ ಚಿಕ್ಕಮ್ಮನ ಹೆಸರಿಗೇ ಇದೆ. ನನ್ನ ಅಜ್ಜ ಈ ದಾವಾ ಪ್ಲಾಟ ಖರೀದಿ ಹಿಡಿದ ದಿನಾಂಕದಿಂದ ಸುಮಾರು 20ವರ್ಷಗ ಳಪೂರ್ವದಿಂದ ಈ ಆಸ್ತಿಯ ಕುರಿತು ನನಗೆ ಗೊತ್ತು.

ಅಜ್ಜನ ಮರಣದ ನಂತರ ವಾರಸಾ ಮಾಡಲು ನಾವು ಪ್ರಯತ್ನಪಟ್ಟಿಲ್ಲ, ನನ್ನ ತಂದೆ ಹಿರಿಯ ಮಗ, ಚಂದ್ರಶೇಖರ ಸಣ್ಣ ಮಗ ಎಂದರೆ ಸರಿ. ನನ್ನ ತಂದೆ ಧಾರವಾಡದಲ್ಲಿ ಹುಟ್ಟಿ ಬೆಳೆದು ಇಲ್ಲೆ ಇದ್ದಾರೆ ಎಂದರೆ ಸರಿ. ಈ ಜಾಗಾ ವಾರಸಾ ಮಾಡಿಕೊಡಲು ನಾನಾಗಲೀ, ನನ್ನ ತಂದೆ ತಾಯಿಯಾಗಲೀ ನನ್ನ ಸಹೋದರರಾಗಲೀ, ತಹಶೀಲ್ದಾರ ಇಲ್ಲವೇ ಗ್ರಾಮ ಲೆಕ್ಕಾಧಿಕಾರಿ ಮುಂದೆ ವಾರಸಾ ಮಾಡಿ ಕೊಡಲು ಅರ್ಜಿ ಕೊಟ್ಟಿಲ್ಲ ನನ್ನ ಚಿಕ್ಕಪ್ಪ ಧಾರವಾಡದಲ್ಲಿ ನೌಕರಿ ಮಾಡಿಲ್ಲ ಎಂದರೆ ಸರಿಯಲ್ಲ,

ನನ್ನ ತಂದೆಯ ಜೀವಿತ ಕಾಲದಲ್ಲಿ ನನ್ನ ತಂದೆಯ ಹೆಸರಿಗೆ ಶ್ರೀಗರ ಏರಿಯಾದಲ್ಲಿ ಸೈಟ್ ನಂಬರ 114 ಇತ್ತು ಎಂದರೆ ಸರಿ. ನನ್ನ ಚಿಕ್ಕಪ್ಪನ ಹೆಸರಿಗೂ ಸಹ ಸೈಟ ನಂಬರ 115 ಇತ್ತು. ಇದು ಸಹ ಹಿರಿಯ ಆಸ್ತಿ ಎಂದರೆ ಸರಿಯಲ್ಲ, ಅಜ್ಜ ಇದ್ದಾಗ ಜಾಯಿಂಟ ಹೆಸರಲ್ಲಿ ಖರಿದಿಸಿದ್ದು ಎಂದರೆ

ಸರಿಯಲ್ಲ, ಅದರ ಖರೀದಿ ಪತ್ರ ಇದೆ. ಅದನ್ನು ಹಾಜರುಪಡಿಸಿಲ್ಲ, ಆ ಆಸ್ತಿಯನ್ನು ದಾವೆಯಲ್ಲಿ ಹಾಕಿಲ್ಲ ಎಂದರೆ ಸರಿ. ಅದು ಸ್ವಂತ ಆಸ್ತಿ, ಅದು ಸ್ವಯಾರ್ಜಿತ ಆಸ್ತಿ ಎಂದು ತೋರಿಸಲು ದಾಖಲಾತಿ ಇಲ್ಲ ಎಂದರೆ ಸರಿಯಲ್ಲ, ಪ್ಲಾಟ ನಂಬರ 114ರಲ್ಲಿ ಪಾಲ ಕೊಡುವುದರಿಂದ ತಪ್ಪಿಸಿಕೊಳ್ಳಲು ಮುದ್ದಾಮ ಆ ಆಸ್ತಿ ಸೇರಿಲ್ಲ ಎಂದರೆ ಸರಿಯಲ್ಲ, ಅದು ಸ್ವಂತದ್ದು, ದಾವಾ ಆಸ್ತಿ ಚಂದ್ರಶೇಖರನ ಪಾಲಿಗೆ ಬಂದ ಸ್ವಂತ ಆಸ್ತಿ ಎಂದರೆ ಸರಿಯಲ್ಲ, ಪ್ಲಾಟ ನಂಬರ 114 ಸಾಮೂಹಿಕ ಆಸ್ತಿ ಎಂದರೆ ಸರಿಯಲ್ಲ,

ನನ್ನ ತಂದೆಯ ಹೆಸರಲ್ಲಿ ಲಕಮನಹಳ್ಳಿಯಲ್ಲಿ ಶೇತ್ಕಿ ಜಮೀನು ಸರ್ವೆ ನಂಬರ 14/2 ಕ್ಷೇತ್ರ 1 ಎಕರೆ 19 ಗುಂಟೆ ಇತ್ತು ಎಂದರೆ ಸರಿ. ಸದರಿ ಜಮೀನಿಗೆ ನನ್ನ ತಂದೆ ತನ್ನ ಹೆಸರನ್ನು ಮಾತ್ರ ದಾಖಲಿಸಿಕೊಂಡು ಮತ್ತು ಸರಕಾರದಿಂದ ವಶಪಡಿಸಿಕೊಂಡಾಗ ತಾನೊಬ್ಬನೇ ಹಣ ಪಡೆದುಕೊಂಡ ಎಂದರೆ ಸರಿ. ಅದು ಪಿತ್ರಾರ್ಜಿತ ಆಸ್ತಿಯಾಗಿತ್ತು ಎಂದರೆ ಸರಿಯಲ್ಲ, ನನ್ನ ತಂದೆ ಶಿವಪ್ಪ ಗುರುಬಸಪ್ಪ ಭಾರತಿ ಇವರು ದಿನಾಂಕ 23-5-1977ರಂದು ಯು ಎಲ್ ಸಿ (ಅರ್ಬನ್ ಲ್ಯಾಂಡ್ ಸೀಲಿಂಗ ಅತಾರಿಟಿ) ಮುಂದೆ ಮೇಲ್ಕಂಡ ಸರ್ವೆ ನಂಬರ 14/2 ತನ್ನ ಪಿತ್ರಾರ್ಜಿತ ಆಸ್ತಿ ಇದೆ ಎಂದು ನಿಡಿ 16ರಂತೆ ಹೇಳಿಕೆ ಕೊಟ್ಟಿದ್ದಾರೆ ಎನ್ನುವುದು ಸರಿಯಲ್ಲ,

ನನ್ನ ತಂದೆ ಬಹಳ ಚಾಣಾಕ್ಷ ವ್ಯಕ್ತಿ ಎನ್ನುವುದು ಸರಿಯಲ್ಲ, ಕರ್ನಾಟಕ ವಿಶ್ವ ವಿದ್ಯಾಲಯದ ಬಾಟನಿ ವಿಭಾಗದ ಹೆಸರಾಂತ ಮುಖ್ಯಸ್ಥರು ಇದ್ದರು ಎಂದರೆ ಸರಿ. ನನ್ನ ತಂದೆ ನ್ಯಾಯಾಲಯಕ್ಕೆ ಬಂದರೆ ಸತ್ಯ ಸಂಗತಿಯನ್ನು ಒಪ್ಪಿಕೊಳ್ಳಬೇಕಾಗುತ್ತದೆ ಎಂಬ ಭಯದಿಂದ ಅವರ ಬದಲಾಗಿ ನಾನು ಸಾಕ್ಷಿ ಕೊಡಲು ಬಂದಿದ್ದೇನೆ ಎಂದರೆ ಸರಿಯಲ್ಲ, ಅವರಿಗೆ ಇಗ ವಯಸ್ಸು 92. ನನ್ನ ತಂದೆ ಶಿವಪ್ಪ ಭಾರತಿ ಸರ್ ಅವರಿಗೆ ನಾವೇ ಒತ್ತಾಯ ಮಾಡಿ ಇದೊಂದು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ,

ದಾವಾ ಬರೆಯಲು ನನ್ನ ತಂದೆ ಮಾಹಿತಿ ಕೊಟ್ಟಿದ್ದಾರೆ. ಹಾಗೂ ಅವರೇ ಸಹಿ ಮಾಡಿದ್ದಾರೆ. ಇಗ ನೋಡಿದ ವಾದ ಪತ್ರದ ಮೇಲೆ ಕಾಣುವ ಸಹಿಗಳನ್ನೆಲ್ಲಾ ನನ್ನ ತಂದೆಯೇ ಮಾಡಿದ್ದಾರೆ. ವಾದ

ಪತ್ರವನ್ನು ನಿಡಿ 19 ಎಂದು ಸಹಿಗಳನ್ನು ನಿಡಿ 19ಎ. ಬಿ. ಸಿ. ಡಿ. ಇ. ಎಫ್, ಜಿ ಎಂದು ಗುರುತಿಸಲಾಯಿತು, ಇಗ ತೋರಿಸಿದ ವಕಾಲತ್ ಮೇಲೂ ಸಹ ನನ್ನ ತಂದೆ ಸಹಿ ಮಾಡಿದ್ದಾರೆ. ಸದರಿ ವಕಾಲತ್‌ನ್ನು ನಿಡಿ 20 ಎಂದು ಸಹಿಯನ್ನು ನಿಡಿ 20ಎ ಎಂದು ಗುರುತಿಸಲಾಯಿತು. ಇಗ ನೋಡಿದ ನಿಡಿ 15 ಪತ್ರದ ಮೇಲಿರುವ ಸಹಿ ನನ್ನ ತಂದೆಯದ್ದು ಇರುತ್ತದೆ ಅದನ್ನು ನಿಡಿ 15ಎ ಎಂದು ಗುರುತಿಸಲಾಯಿತು. ವಾದ ಪತ್ರ ನಿಡಿ 19, ವಕಾಲತ್ ನಿಡಿ 20, ಪತ್ರ ನಿಡಿ 15ರ ಮೇಲೆ ಇರುವ ಸಹಿಗಳು ನನ್ನ ತಂದೆ ಮಾಡಿದ್ದು ಎಂದರೆ ಸರಿ, ಸದರಿ ಸಹಿಗಳು ನಿಡಿ 1ಎ ಮೇಲಿರುವ ಸಹಿಗೆ ತಾಳೆಯಾಗುತ್ತದೆ ಎಂದರೆ ಸರಿಯಲ್ಲ, ನಿಡಿ 1ಎ ಮೇಲಿದ್ದ ಸಹಿ ನನ್ನ ತಂದೆಯದ್ದು ಇದ್ದರೂ ಸಹ ಆತನ ಸಹಿ ಅಲ್ಲ ಎಂದು ಕೋರ್ಟಿನಲ್ಲಿ ಸುಳ್ಳು ಸಾಕ್ಷಿ ಕೊಟ್ಟೆ ಎಂದರೆ ಸರಿಯಲ್ಲ,

ಮರು ವಿಚಾರಣೆ ಇಲ್ಲ

(ತೆರೆ ದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ, ನನ್ನ ಸಮಕ್ಷಮ

ಪ್ರಧಾನ ದಿವಾಣಿ ನ್ಯಾಯಾದೀಶರು
ಮತ್ತು ಪ್ರದನ್ಯಾದಂ, ಧಾರವಾಡ